





ಚಿತ್ರ:1 ದೊಡ್ಡಬಳ್ಳಾಪುರ ತಾಲ್ಲೂಕಿನ ಹಾಡೋನಹಳ್ಳಿಯಲ್ಲಿ ಅರ್ಕಾವತಿ ಹವಾಮಾನ ಕೇಂದ್ರವನ್ನು ಶಾಸಕ ಪಿಳ್ಳಮುನಿಶಾಮಪ್ಪ ಉದ್ಘಾಟಿಸಿದರು. ಚಿತ್ರ:2 ವಿಶ್ವ ಭೂ ದಿನಾಚರಣೆ ಮತ್ತು ಅರ್ಕಾವತಿ ಹವಾಮಾನ ಕೇಂದ್ರದ ಮಾಹಿತಿಯನ್ನು ಶರಶ್ಚಂದ್ರ ಲೇಲೆ ನೀಡಿದರು. ಚಿತ್ರ:3 ಉದ್ಘಾಟನಾ ಕಾರ್ಯಕ್ರಮದಲ್ಲಿ ಭೂಮಿ ತಾಯಿ ಬಳಗ, ಹಳ್ಳಿ ಜಾನಪದ ತಂಡ, ನಾಗದೇನಹಳ್ಳಿ ಶಾಲಾ ವಿದ್ಯಾರ್ಥಿಗಳು ಪರಿಸರ ಜಾಗೃತಿ ಗೀತೆಗಳನ್ನು ಹಾಡಿದರು

### ಹಾಡೋನಹಳ್ಳಿಯಲ್ಲಿ ವಿಶ್ವ ಭೂ ದಿನ ಆಚರಣೆ • ಹವಾಮಾನ ಕೇಂದ್ರ ಉದ್ಘಾಟನೆ

# ‘ನೆಲಜಲದ ಕಾಳಜಿ ಹೆಚ್ಚದಿದ್ದರೆ ಭವಿಷ್ಯ ಭೀಕರ’

**ಪ್ರಜಾವಾಣಿ ವಾರ್ತೆ**

ದೊಡ್ಡಬಳ್ಳಾಪುರ: ‘ಭೂಮಿಯ ಉಳಿವಿಗಾಗಿ ಮಣ್ಣು, ನೀರು ಮತ್ತು ಸಸ್ಯ ಸಂರಕ್ಷಣೆಯ ಕುರಿತು ಅರಿವು ಮೂಡಿಸುವ ಅಗತ್ಯವಿದ್ದು ಪರಿಸರ ಕಾಳಜಿ ಕೇವಲ ಭಾಷಣಗಳಿಗೆ ಸೀಮಿತವಾಗಬಾರದು’ ಎಂದು ಶಾಸಕ ಪಿಳ್ಳಮುನಿಶಾಮಪ್ಪ ಹೇಳಿದರು.

ತಾಲ್ಲೂಕಿನ ಹಾಡೋನಹಳ್ಳಿಯಲ್ಲಿ ವಿಶ್ವ ಭೂ ದಿನಾಚರಣೆ ಮತ್ತು ಅರ್ಕಾವತಿ ಹವಾಮಾನ ಕೇಂದ್ರದ ಉದ್ಘಾಟನಾ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

‘ಅಂತರ್ಜಲ ಕುಸಿದಿರುವ ಕಾರಣ ರೈತರ ಭೂಮಿ ಬರಡಾಗುತ್ತಿದೆ. ಭೂಮಿ ಉಳಿದರೆ ಮಾತ್ರವೇ ಎಲ್ಲಾ ಜೀವಿಗಳು ಉಳಿಯುತ್ತವೆ ಎಂಬುದನ್ನು ಪ್ರತಿಯೊಬ್ಬರೂ ಅರ್ಥ ಮಾಡಿಕೊಳ್ಳಬೇಕು’ ಎಂದರು.

ಅಶೋಕ ಟ್ರಸ್ಟ್ ಫಾರ್ ರಿಸರ್ಚ್ ಇನ್ ಎಕಾಲಜಿ ಅಂಡ್ ದಿ ಎನ್ವಿರಾನ್ಮೆಂಟ್ ಸಂಸ್ಥೆಯ ಶರಶ್ಚಂದ್ರ ಲೇಲೆ ಮಾತನಾಡಿ, ‘ಅರ್ಕಾವತಿ ಪುನಶ್ಚೇತನವಾಗಬೇಕಾದರೆ ನೀರಿನ ಬಳಕೆ, ಮಳೆ ನೀರಿನ ಕೊಯ್ಲು, ಭೂ ಬಳಕೆ ಕುರಿತು ಜನರಲ್ಲಿ ಅರಿವು ಮೂಡಿಸಬೇಕು.

ಅರ್ಕಾವತಿ ನದಿ ಪುನಶ್ಚೇತನಕ್ಕೆ ಪೂರಕವಾಗಿ ಜಲಾನಯನದ ನೀರಿನ ನಿರ್ವಹಣೆ ಕುರಿತು ಸಂಶೋಧನೆಯನ್ನು ಮಾಡಲಾಗುತ್ತಿದೆ. ಇದಕ್ಕಾಗಿ ಈಗಾಗಲೇ ದೊಡ್ಡಬಳ್ಳಾಪುರ ತಾಲ್ಲೂಕಿನ ಅರಳುಮಲ್ಲಿಗೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಸರ್ವ ಮಾನ್ಯ (ಎಸ್‌ಎಂ) ಗೊಲ್ಲಹಳ್ಳಿಯಲ್ಲಿ ಸ್ವಯಂಚಾಲಿತ ಹವಾಮಾನ ಕೇಂದ್ರವನ್ನು ಸ್ಥಾಪಿಸಲಾಗಿದೆ. ಈ ಹವಾಮಾನ ಕೇಂದ್ರಗಳಿಂದ ವಾರ್ಷಿಕ ಮಳೆಯ ಪ್ರಮಾಣದಲ್ಲಿ ಆಗುವ ವ್ಯತ್ಯಾಸ, ನೀರಿನ ಬರಕ್ಕೆ ಕಾರಣವಾಗುವ ಅಕಾಲಿಕ ಮಳೆ, ಅಂತರ್ಜಲ ಬಳಕೆ ಮತ್ತು ಹರಿವು, ನೀಲಗಿರಿ ಮತ್ತಿತರ ಬೆಳೆಗಳಿಂದಾಗುವ ಬಾಷ್ಪೀಕರಣ, ಕೆರೆ ಕಟ್ಟೆಗಳಲ್ಲಿ ನೀರಿನ ಹರಿವು ಮತ್ತು ಇಂಗುವಿಕೆ ಮುಂತಾದ ಹಲವು ಅಂಶಗಳ ಕುರಿತು ವೈಜ್ಞಾನಿಕ ಅಧ್ಯಯನ ಮಾಡಲಾಗುತ್ತಿದೆ’ ಎಂದರು.

ಸಾಮಾಜಿಕ ಕಾರ್ಯಕರ್ತ ಜನಾರ್ದನ ಕೆಸರಗದ್ದೆ ಮಾತನಾಡಿ, ‘ನಮ್ಮ ನೀರಿನ ಬಳಕೆಯ ಕ್ರಮವನ್ನು ವಿಮರ್ಶಿಸಿ ಸರಿಪಡಿಸಿಕೊಳ್ಳಬೇಕು. ಮುಂದಿನ ಹತ್ತು ಹದಿನೈದು ವರ್ಷ ಈ ಭಾಗದ ಜಲ ಸಂಪನ್ಮೂಲ ಸಂರಕ್ಷಣೆಯ ಆಂದೋಲನದಲ್ಲಿ ಪ್ರತಿಯೊಬ್ಬರೂ ತೊಡಗಿಸಿಕೊಳ್ಳಬೇಕು. ಹೀಗಾದಾಗ ಮಾತ್ರವೇ ಅರ್ಕಾವತಿಯ ಜಲಾನಯನದಿಂದ ನೀರಿನ ನಿರ್ವಹಣೆ ಮಾಡುವುದು ಹೇಗೆ ಎಂಬುವುದನ್ನು ತಿಳಿಯಲು ಸಾಧ್ಯವಾಗುತ್ತದೆ’ ಎಂದರು.

ಕಾರ್ಯಕ್ರಮದಲ್ಲಿ ಜೆಡಿಎಸ್ ಜಿಲ್ಲಾ ಉಪಾಧ್ಯಕ್ಷ ಎಚ್.ಅಪ್ಪಯ್ಯಣ್ಣ, ಬೆಂಗಳೂರಿನ ಅಶೋಕ ಟ್ರಸ್ಟ್ ಫಾರ್ ರಿಸರ್ಚ್ ಇನ್ ಎಕಾಲಜಿ ಅಂಡ್ ದಿ ಎನ್ವಿರಾನ್ಮೆಂಟ್ ಸಂಸ್ಥೆಯ ಡಾ.ವೀಣಾ ಶ್ರೀನಿವಾಸ್, ಹಾಡೋನಹಳ್ಳಿ ಕೃಷಿ ವಿಜ್ಞಾನ ಕೇಂದ್ರದ ಮುಖ್ಯಸ್ಥ ಡಾ.ಶ್ರೀನಿವಾಸ್, ಮೇಳೆಕೋಟೆ ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷ ಚಿದಾನಂದ್, ನಾಗರಾಜಗೌಡ, ಜೆಡಿಎಸ್ ಮುಖಂಡರಾದ ಲಕ್ಷ್ಮೀ ನಾರಾಯಣ್, ವೆಂಕಟರಮಣಪ್ಪ, ಸಾಮಾಜಿಕ ಕಾರ್ಯಕರ್ತರಾದ ಮಂಜುನಾಥ್ ಮುಂತಾದವರು ಭಾಗವಹಿಸಿದ್ದರು.

ಕಾರ್ಯಕ್ರಮದಲ್ಲಿ ಭೂಮಿ ತಾಯಿ ಬಳಗ, ಹಳ್ಳಿ ಜಾನಪದ ತಂಡ, ನಾಗದೇನಹಳ್ಳಿ ಶಾಲಾ ವಿದ್ಯಾರ್ಥಿಗಳು ಪರಿಸರ ಜಾಗೃತಿ ಗೀತೆಗಳನ್ನು ಹಾಡಿದರು.